

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ–591156

46ನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸಭೆ ಹಾಗೂ 2024ನೇ ಸಾಲಿನ 1ನೇ ಸಭೆಯ ನಡಾವಳಿಗಳು

ದಿನಾಂಕ : ಮಂಗಳವಾರ, 12 ಮಾರ್ಚ್ 2024
ಸಮಯ : ಪೂರ್ವಾಹ್ನ 11 : 00 ಘಂಟೆ
ಸ್ಥಳ : ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ 46ನೇ ಸಾಮಾನ್ಯ ಸಭೆಯ ಹಾಗೂ 2024ನೇ ಸಾಲಿನ 1ನೇ ಸಭೆಯು** ದಿನಾಂಕ **12 ಮಾರ್ಚ್ 2024** ರಂದು **ಪೂರ್ವಾಹ್ನ 11.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1. **ಪ್ರೊ. ಸಿ. ಎಂ. ತ್ಯಾಗರಾಜ**	**ಕುಲಪತಿಗಳು ಹಾಗೂ ಅಧ್ಯಕ್ಷರು**
2. ಡಾ. ತಳವಾರ್ ಸಾಬಣ್ಣ, ವಿಧಾನ ಪರಿಷತ್ತಿನ ಶಾಸಕರು	ಸದಸ್ಯರು
3. ಶ್ರೀ ಆಯ್. ಎಸ್. ಪವಾರ	ಸದಸ್ಯರು
4. ಡಾ. ಬಸನಗೌಡ ಬಿ. ಪೋಲಿಸ್‌ಪಾಟೀಲ್	ಸದಸ್ಯರು
5. ಪ್ರೊ. ಬಿ. ಎಂ. ಕೋಲಾರ	ಸದಸ್ಯರು
6. ಪ್ರೊ. ಸಿದ್ಧಗೌಡ ಪಾಟೀಲ್	ಸದಸ್ಯರು
7. ಡಾ. ಎಸ್. ಎ. ಪತಂಗಿ	ಸದಸ್ಯರು
8. ಡಾ. ವಿರಾಜ ಮೋದಿ	ಸದಸ್ಯರು
9. ಪ್ರೊ. ಯು. ಎಂ. ಶಿವನಗೌಡರ್	ಸದಸ್ಯರು
10. ಡಾ. ವಿ. ಪಿ. ಕುರಿ	ಸದಸ್ಯರು
11. ಶ್ರೀ ಜಿ. ಎಚ್. ಮನ್ನೂರ	ಸದಸ್ಯರು
12. ಡಾ.(ಶ್ರೀಮತಿ) ನಿರ್ಮಲಾ ಜಿ. ಭಟ್ಟಲ	ಸದಸ್ಯರು
13. ಪ್ರೊ. ಡಿ. ಎನ್. ಪಾಟೀಲ್	ಸದಸ್ಯರು
14. ಪ್ರೊ. ಚಂದ್ರಿಕಾ.ಕೆ.ಬಿ	ಸದಸ್ಯರು
15. ಪ್ರೊ. ಕಮಲಾಕ್ಷಿ ತಡಸದ	ಸದಸ್ಯರು
16. ಪ್ರೊ. ಬಾಲಚಂದ್ರ ಹೆಗಡೆ	ಸದಸ್ಯರು
17. ಪ್ರೊ. ಕಾಂತರಾಜು ಕಾಮಣ್ಣ	ಸದಸ್ಯರು
18. ಪ್ರೊ. ವ್ಹಿ. ಎಫ್. ನಾಗಣ್ಣವರ	ಸದಸ್ಯರು
19. ಪ್ರೊ. ಎಂ. ಸಿ. ಎರ್ರಿಸ್ವಾಮಿ	ಸದಸ್ಯರು
20. ಪ್ರೊ. ವ್ಹಿ. ಎಂ. ಬಂಕಾಪೂರ, **(ಗ್ರಂಥಪಾಲಕರು)**	ಸದಸ್ಯರು
21. ಪ್ರೊ. ಅಶೋಕ ಡಿ' ಸೋಜಾ **(ಯೋ.ಮೇ.ಮೌ ಮಂಡಳಿ)**	ಸದಸ್ಯರು
22. ಪ್ರೊ. ಎಸ್.ಎಂ. ಗಂಗಾಧರಯ್ಯ, **(ನಿರ್ದೇಶಕರು, ಸಿ.ಡಿ.ಸಿ.)**	ಸದಸ್ಯರು
23. ಪ್ರೊ. ಎಸ್. ಬಿ. ಆಕಾಶ **(ಹಣಕಾಸು ಅಧಿಕಾರಿಗಳು)**	ಸದಸ್ಯರು
24. ಶ್ರೀ ರವೀಂದ್ರನಾಥ ಕದಮ್, **(ಕುಲಸಚಿವರು(ಮೌಲ್ಯಮಾಪನ)**	ಸದಸ್ಯರು
25. ರಾಜಶ್ರೀ ಜೈನಾಪೂರ ಕೆ.ಎ.ಎಸ್.	**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

II. ಹಾಜರಾಗದ ಸದಸ್ಯರು

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	ಸದಸ್ಯರು
3. ಶ್ರೀ ಅಭಯ ಪಾಟೀಲ್, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
4. ಶ್ರೀ ಸಿದ್ದು ಸವದಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
5. ಶ್ರೀ ಪಾಟೀಲ.ಎ.ಎಸ್.(ನಡಹಳ್ಳಿ), ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
6. ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು
7. ಪ್ರೊ. ಬಸವರಾಜ್ ಪದ್ಮಶಾಲಿ,	ಸದಸ್ಯರು
8. ಪ್ರೊ. ಬಸವರಾಜ್ ಪದ್ಮಶಾಲಿ, ನಿರ್ದೇಶಕರು, **(ವಿದ್ಯಾರ್ಥಿ ಕಲ್ಯಾಣ)**	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156

ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ **12 ಮಾರ್ಚ್ 2024** ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ ವಿಶ್ವವಿದ್ಯಾಲಯದ **46ನೇ ಹಾಗೂ 2024ನೇ ಸಾಲಿನ 1ನೇ** ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31.
2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ: 29.02.2024.
3. ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 04.03.2024.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 46ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ಆಯೋಜನೆ ಮಾಡಲಾಗಿತ್ತು. ಸಭೆಯ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಲಾಯಿತು. ಸರ್ಕಾರದಿಂದ ಹೊಸದಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡ ಪ್ರೊ. ಸಿ. ಎಂ. ತ್ಯಾಗರಾಜ ಇವರಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ತಮಗೆ ಕುಲಪತಿಗಳ ಹುದ್ದೆಗೆ ನೇಮಕ ಮಾಡಿದ ಗೌರವಾನ್ವಿತ ರಾಜ್ಯಪಾಲರು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಇತರೇ ಅಧಿಕಾರಿ ವರ್ಗದವರಿಗೆ ಧನ್ಯವಾದ ತಿಳಿಸಿ, ವಿಶ್ವವಿದ್ಯಾಲಯದ ಏಳ್ಗೆಗೆ ಹಾಗೂ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಇತ್ತೀಚೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ PM-USHA ಯೋಜನೆಯಡಿ 100 ಕೋಟಿ ರೂಪಾಯಿಗಳು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ್, ಬೆಂಗಳೂರು ಇಲ್ಲಿಂದ 50 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿರುವುದು ಹೆಮ್ಮೆಯ ವಿಷಯ. ಇದರೊಂದಿಗೆ ವಿಶ್ವವಿದ್ಯಾಲಯದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸುವ, ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿ ಕೂಡ ಇದೆ ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು. ಇದೇ ಸಂದರ್ಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಹಣಕಾಸು ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಭರತ್ ಕಟ್ಟಿ ಇವರು ಮರಣ ಹೊಂದಿರುವ ವಿಷಯಕ್ಕೆ ಸಂತಾಪ ವ್ಯಕ್ತಪಡಿಸಿ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿ ವಿಶ್ವವಿದ್ಯಾಲಯದ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದರು.

ತದನಂತರ, ವಿಷಯ ಸೂಚಿಗಳನ್ನು ಪ್ರಸ್ತಾಪಿಸಲಾಯಿತು.

ಕ್ರ.ಸಂ.	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
1	2024/03/01	ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು.
ತೀರ್ಮಾನ		**ದಿನಾಂಕ: 07.11.2023 ರಂದು ನಡೆದ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲನೆಗಾಗಿ ಮಂಡಿಸಲಾಯಿತು. ತೀರ್ಮಾನ ಸಂಖ್ಯೆ: 3 ರಲ್ಲಿ 2023–24 ನೇ ಸಾಲಿನಿಂದ ಸ್ನಾತಕ ಕೋರ್ಸ್‌ಗಳ 1 ರಿಂದ 4ನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು ಈಗಾಗಲೇ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಅಂತರಜಾಲದಲ್ಲಿ ಪ್ರಕಟಿಸಿರುತ್ತಾರೆ. ಸದರಿ ಸ್ನಾತಕ ಕೋರ್ಸಗಳ ಪಠ್ಯಕ್ರಮಗಳನ್ನು 2023–24ನೇ ಸಾಲಿನಿಂದ ಅಳವಡಿಸಿಕೊಳ್ಳಲು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಅನುಮೋದನೆ ನೀಡಿತು" ಎಂಬ ತೀರ್ಮಾನದಲ್ಲಿ ಪಠ್ಯಕ್ರಮದ ಬದಲಾಗಿ Course Structure ಎಂದು ನಮೂದಿಸಲು ಸಭೆಯು ಸೂಚಿಸಿತು.**

<table>
<tr><td colspan="2"></td><td>ತದನಂತರ, ದಿನಾಂಕ: 07.11.2023 ರ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಅನುಮೋದಿಸಿತು.</td></tr>
<tr><td>2</td><td>2024/03/02</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳನ್ನು ಪಿಎಚ್.ಡಿ. ಮಾರ್ಗದರ್ಶಕರೆಂದು ಮಾನ್ಯತೆ ನೀಡಿದ್ದಕ್ಕಾಗಿ ಅನುಸಮರ್ಥನೆ ನೀಡುವ ಕುರಿತು.</td></tr>
<tr><td>ತೀರ್ಮಾನ</td><td colspan="2">ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ಮಾನ್ಯ ಕುಲಪತಿಗಳ ಅನುಮೋದನೆ ಹಾಗೂ ಪಿಎಚ್.ಡಿ. ನಿಯಮಾವಳಿ 10(10.1) ಹಾಗೂ 10(10.4) ರ ಪ್ರಕಾರ ಪಿಎಚ್.ಡಿ. ಮಾರ್ಗದರ್ಶಕರೆಂದು ಮಾನ್ಯತೆಯನ್ನು ನೀಡಲಾಗಿದೆ. ಸದರಿ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.
<table>
<tr><th>ಸಂ</th><th>ಅಭ್ಯರ್ಥಿಯ ಹೆಸರು</th><th>ವಿಭಾಗ</th><th>ಮಾರ್ಗದರ್ಶಕರೆಂದು ಮಾನ್ಯತೆ ಪಡೆದ ದಿನಾಂಕ</th></tr>
<tr><td>1</td><td>ಡಾ. ಯಾಸ್ಮೀನ ಬೇಗಂ ನದಾಫ,
ಸಹಾಯಕ ಪ್ರಾಧ್ಯಾಪಕರು,
ರಾಚವಿವಿ, ಬೆಳಗಾವಿ</td><td>ವಾಣಿಜ್ಯಶಾಸ್ತ್ರ</td><td>16.12.2023</td></tr>
<tr><td>2</td><td>ಡಾ. ಹರ್ಷಾ ಹೆಗಡೆ
(ವಿಜ್ಞಾನಿ–ವಿ)
ಆಯ್.ಸಿ.ಎಮ್.ಆರ್., ಬೆಳಗಾವಿ</td><td>ಸಸ್ಯಶಾಸ್ತ್ರ</td><td>07.02.2024</td></tr>
<tr><td>3</td><td>ಡಾ. ರಾಜೇಶ ಕೆ ಜೋಷಿ
(ವಿಜ್ಞಾನಿ–ಇ)
ಆಯ್.ಸಿ.ಎಂ. ಆರ್.
ಬೆಳಗಾವಿ</td><td>ರಸಾಯನಶಾಸ್ತ್ರ</td><td>14.02.2024</td></tr>
</table>
</td></tr>
<tr><td>3</td><td>2024/03/03</td><td colspan="2">ಸ್ನಾತಕ ಕೋರ್ಸ್‌ನ 3 ಮತ್ತು 5ನೇ ಸೆಮಿಸ್ಟರ್‌ನಲ್ಲಿ ಎನ್.ಸಿ.ಸಿ. ಯನ್ನು ಆಯ್ಕೆಯ ವಿಷಯವನ್ನಾಗಿ ಅಳವಡಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td colspan="2">ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಕೋರ್ಸ್‌ನ 3 ಮತ್ತು 5ನೇ ಸೆಮಿಸ್ಟರನಲ್ಲಿ ಎನ್.ಸಿ.ಸಿ. ಯನ್ನು ಆಯ್ಕೆ ವಿಷಯವಾಗಿ ಸೇರಿಸಲು ಶಿಕ್ಷಣ ವಿಭಾಗವು ಸಲ್ಲಿಸಿರುವ ಬಿ.ಓ.ಎಸ್. ಸಮಿತಿಯ ಪತ್ಯಕ್ರಮವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.</td></tr>
<tr><td>4</td><td>2024/03/04</td><td colspan="2">2023–24 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಕೋರ್ಸ್‌ಗಳ 5ನೇ ಸೆಮಿಸ್ಟರ್‌ನಲ್ಲಿ ಅಧ್ಯಯನ ಮಾಡುತ್ತಿರುವ SEC ವಿಷಯವಾದ Cyber Security/Employability Skill ವಿಷಯಗಳಿಗೆ ಪರೀಕ್ಷಾ ವೇಳೆ ನಿಗದಿಪಡಿಸುವ ಕುರಿತು.</td></tr>
<tr><td>ತೀರ್ಮಾನ</td><td colspan="2">ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಕೋರ್ಸ್‌ಗಳ 5ನೇ ಸೆಮಿಸ್ಟರ್‌ನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ Cyber Security/Employability Skill ವಿಷಯವನ್ನು ಕಡ್ಡಾಯವಾಗಿ SEC ಯನ್ನಾಗಿ ಬೋಧನೆ ಮಾಡಬೇಕಾಗಿರುತ್ತದೆ. ಸದರಿ ವಿಷಯಗಳ ಪರೀಕ್ಷೆಯು MCQ ಮಾದರಿಯಲ್ಲಿ 50 ಅಂಕದಾಗಿದ್ದು, ಪರೀಕ್ಷಾ ಅವಧಿಯನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ತಪ್ಪಾಗಿ 3 ಗಂಟೆಯ ಅವಧಿಯನ್ನು ನಮೂದಿಸಿರುತ್ತಾರೆ. ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರ ನಿರ್ದೇಶನದಂತೆ ಸಂಬಂಧಪಟ್ಟ ಬಿ.ಓ.ಎಸ್. ಸಮಿತಿಯಲ್ಲಿ ಪರೀಕ್ಷಾ ವೇಳೆಯನ್ನು ಬದಲಾವಣೆ ಮಾಡಬಹುದಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಸದರಿ ವಿಷಯಗಳನ್ನು ಬಿ.ಓ.ಎಸ್. ಸಮಿತಿಯಲ್ಲಿ ಮಂಡಿಸಿ, 3 ಗಂಟೆಯ ಪರೀಕ್ಷಾ ಅವಧಿಯನ್ನು 1.30 ಗಂಟೆಗೆ ಅವಧಿಗೆ ನಿಗದಿ ಪಡಿಸಲು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಅನುಮೋದನೆ ನೀಡಿತು.</td></tr>
</table>

5	2024/03/05	2024–25 ನೇ ಸಾಲಿನ ಸಂಯೋಜನೆಗಾಗಿ ಸಂಯೋಜನಾ ಶುಲ್ಕ ಮತ್ತು ಇತರೆ ಪರಿಷ್ಕೃತ ಶುಲ್ಕಗಳ ಅನುಮೋದನೆ ನೀಡಲು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಹಣದುಬ್ಬರ ಏರಿಕೆ(Inflatory Rise) ಕಾರಣ ವರ್ಷದಿಂದ ವರ್ಷಕ್ಕೆ ವಿವಿಧ ಶುಲ್ಕಗಳನ್ನು ಹೆಚ್ಚಿಸಲಾಗುತ್ತದೆ. ಅದರಂತೆ, 2024–25ನೇ ಸಾಲಿನ ಸಂಯೋಜನೆಗಾಗಿ ಸಂಯೋಜನಾ ಶುಲ್ಕ ಮತ್ತು ಇತರೆ ಪರಿಷ್ಕೃತ ಶುಲ್ಕಗಳನ್ನು ನಿಗದಿಪಡಿಸಲು ಪ್ರೊ. ಗಂಗಾಧರಯ್ಯ, ಪ್ರಾಧ್ಯಾಪಕರು/ಮುಖ್ಯಸ್ಥರು, ಕನ್ನಡ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿತ್ತು. ಸದರಿ ಸಮಿತಿಯು ಸಭೆಯನ್ನು ನಡೆಸಿ ಸಂಯೋಜನಾ ಶುಲ್ಕ ಮತ್ತು ಇತರೆ ಪರಿಷ್ಕೃತ ಶುಲ್ಕಗಳ ಕುರಿತು ಸಲ್ಲಿಸಿದ ನಡಾವಳಿ/ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
6	2024/03/06	ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘದ ಶ್ರೀ ಘೂಲಸಿಂಗ ನಾರಾಯಣ ಚವ್ಹಾಣ ಶಿಕ್ಷಣ ಮಹಾವಿದ್ಯಾಲಯಕ್ಕೆ ಸಂಯೋಜನೆ ಮುಂದುವರಿಕೆ ನೀಡಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಕುರಿತು.
ತೀರ್ಮಾನ		ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘ ಶ್ರೀ ಘೂಲಸಿಂಗ ನಾರಾಯಣ ಚವ್ಹಾಣ ಶಿಕ್ಷಣ ಮಹಾವಿದ್ಯಾಲಯದ ಸಂಯೋಜನೆಯು 2023–24ನೇ ಶೈಕ್ಷಣಿಕ ಸಾಲಿನಲ್ಲಿ ಕೊನೆಗೊಂಡಿದ್ದು, ಅದರ ಮುಂದುವರಿಕೆಗಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಅದರಂತೆ, ಸ್ಥಾನಿಕ ತನಿಖಾ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ, ಮಹಾವಿದ್ಯಾಲಯವನ್ನು ಪರಿಶೀಲಿಸಿದ ನಂತರ ಅದರ ಮುಂದುವರಿಕೆಗಾಗಿ ಶಿಫಾರಸ್ಸು ಮಾಡಿರುವುದಿಲ್ಲ. ಈ ಕುರಿತು ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಪ್ರತ್ಯುತ್ತರವಾಗಿ ಸರ್ಕಾರವು ಮಹಾವಿದ್ಯಾಲಯದ ಮುಂದುವರಿಕೆಯ ಪ್ರಸ್ತಾವನೆಯನ್ನು ಪುರಸ್ಕರಿಸುವ/ತಿರಸ್ಕರಿಸುವ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 59(17) ರನ್ವಯ, ನಿಯಮಾನುಸಾರ ವಿದ್ಯಾವಿಷಯಕ್ ಪರಿಷತ್ತಿನೊಂದಿಗೆ ಸಮಾಲೋಚಿಸಿ ಸಿಂಡಿಕೇಟ್ ಸಭೆಯ ಮಂಜೂರಾತಿಯೊಂದಿಗೆ ಅಗತ್ಯ ಕ್ರಮವಹಿಸಲು ನಿರ್ದೇಶಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು, NCTE ಯಿಂದ ಅನುಮತಿ ಪಡೆದ ನಂತರ ಸದರಿ ಮಹಾವಿದ್ಯಾಲಯದ ಮನವಿಯನ್ನು ಪರಿಗಣಿಸಲಾಗುವುದು ಎಂಬ ಮಾಹಿತಿಯನ್ನು ಪತ್ರದ ಮೂಲಕ ಮಹಾವಿದ್ಯಾಲಯಕ್ಕೆ ತಿಳಿಸಲು ಸಭೆಯು ಸೂಚಿಸಿತು.
7	2024/03/07	2024–25 ನೇ ಸಾಲಿನ ಆಯವ್ಯಕ್ಕೆ ಅನುಮೋದನೆ ನೀಡುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024–25 ನೇ ಸಾಲಿನ ಆಯವ್ಯಯವನ್ನು ಸಿದ್ಧಪಡಿಸಿ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಆಯವ್ಯಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು		
I	2024/03/ I	ವಿಶ್ವವಿದ್ಯಾಲಯದಲ್ಲಿ “Board Valuation” ಪದ್ಧತಿಯನ್ನು ಅಳವಡಿಸಿಕೊಳ್ಳುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ‘Challenge Valuation & Board Valuation’ ಅಳವಡಿಸಿಕೊಳ್ಳಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಒಂದು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ: 01.02.2024 ರಂದು ಸಭೆ ಜರುಗಿಸಿ ಸಲ್ಲಿಸಿದ ವರದಿಯನ್ನು ಕುಲಸಚಿವರು(ಮೌ) ಇವರು ಸಭೆಗೆ ವಿವರಿಸಿದರು. ಸದರಿ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

II	2024/03/ II	ರಾಣೆ ಚನ್ನಮ್ಮ ವಿಶ್ವವಿದ್ಯಾಲಯದ ಹೊಸದಾಗಿ ಸ್ನಾತಕೋತ್ತರ ಕೇಂದ್ರಗಳನ್ನು ಹಾಗೂ ವಿಭಾಗಗಳನ್ನು ತೆರೆಯುವ ಬಗ್ಗೆ.
ತೀರ್ಮಾನ		ಪ್ರಸ್ತುತ ಹಿರೇಬಾಗೇವಾಡಿ–ಹಾಲಗಿಮರ್ಡಿ ಗ್ರಾಮದಲ್ಲಿ ರಾಣೆ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ, ಸದರಿ ಕಾಮಗಾರಿ ಪೂರ್ಣಗೊಂಡ ನಂತರ ಹೊಸದಾಗಿ ಸ್ನಾತಕೋತ್ತರ ಕೇಂದ್ರಗಳನ್ನು ಹಾಗೂ ವಿಭಾಗಗಳನ್ನು ತೆರೆಯುವ ವಿಷಯದ ಕುರಿತು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.
III	2024/03/ III	ವಿವಿಧ ನೀತಿಗಳನ್ನು(Policy) ರೂಪಿಸುವ ಕುರಿತು
ತೀರ್ಮಾನ		ರಾಣೆ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಲ್ಲಿ, ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಮಹಾವಿದ್ಯಾಲಯಗಳಲ್ಲಿ ಶಿಸ್ತು, ಆಡಳಿತದಲ್ಲಿ ಪಾರದರ್ಶಕತೆ ಜಾರಿ ತರಲು Hon'ble Code Policy, Code for Officials, Code of Conduct, Research Award Policy ಹಾಗೂ ಇತರೇ ನೀತಿಗಳನ್ನು(Policy) ರಚಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.
IV	2024/03/ IV	"Research Adalat Cell" ಸ್ಥಾಪಿಸುವ ಕುರಿತು.
ತೀರ್ಮಾನ		ಬೋಧಕ, ಬೋಧಕೇತರ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ವಿಶ್ವವಿದ್ಯಾಲಯದಲ್ಲಿ "Research Adalat Cell" ಸ್ಥಾಪಿಸಿ, ರೂಪು–ರೇಷೆಗಳನ್ನು ತಯಾರಿಸಲು ಸಭೆಯು ಅನುಮೋದನೆ ನೀಡಿತು.
V	2024/03/ V	"RCU Round Table" ಆಯೋಜಿಸುವ ಕುರಿತು.
ತೀರ್ಮಾನ		ಪ್ರತಿ ತಿಂಗಳು "RCU Round Table" ಆಯೋಜನೆ ಮಾಡಲು ಸಭೆಯು ಅನುಮೋದನೆ ನೀಡಿತು.

ಮುಂದುವರೆದು, ಕುಲಸಚಿವರಾದ ರಾಜಶ್ರೀ ಜೈನಾಪೂರ ಇವರ ಸಾರ್ವಜನಿಕ ಹಾಗೂ ತಮ್ಮ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣನ್ಯೂಸ ವತಿಯಿಂದ "ಸುವರ್ಣ ಕನ್ನಡಿಗ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಹಾಗೂ ಡಾ. ಬಿ.ಜಿ.ಹೆಗಡೆ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಹಾಗೂ ಡಾ. ಪಿ.ಎಂ. ಗುರುಬಸವರಾಜ, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಇವರುಗಳು DST-JSPS Fellowship ಅಡಿಯಲ್ಲಿ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಜಪಾನ ದೇಶಕ್ಕೆ ಹೋಗಿ ಬಂದಿರುತ್ತಾರೆ. ಕಾರಣ, ಈ ಸಾಧಕರನ್ನು ಸಭೆಯು ಸನ್ಮಾನಿಸಿತು.

ಕೊನೆಯದಾಗಿ, ಕುಲಸಚಿವರು(ಮೌ) ಧನ್ಯವಾದಗಳನ್ನು ತಿಳಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು **ಕುಲಪತಿಗಳು ಹಾಗೂ ಅಧ್ಯಕ್ಷರು**

ಇವರಿಗೆ,

ರಾಣೆ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ: ಹಣಕಾಸು ಅಧಿಕಾರಿಗಳು, ರಾಣೆ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.